**ಒ ಎಸ್ ನಂ. 95/2024**
**ಪಿ ಡಬ್ಲ್ಯೂ: 01**

**ದಿಃ 06-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿಯರ ಪರ ಶ್ರೀ ಪಿ ಎಸ್ ಯು ವಕೀಲರಿಂದಃ**

ನಾನು **10** ನೇ ತರಗತಿಯವರಿಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ವ್ಯವಸಾಯದ ಜೊತೆಗೆ ರಾಜಕೀಯ ಹಾಗೂ ಲಾರಿ ಸಾರಿಗೆ ವ್ಯವಹಾರ ಮಾಡುತ್ತಿದ್ದೆ. ಲಾರಿ ನಮ್ಮ ಕಾಕನ ಮಗ ಈರಪ್ಪ ಕುಂಬಾರ ಇವರ ಹೆಸರಿನಲ್ಲಿ ಇತ್ತು. ಸದರಿಯವರು ಮೃತ ಪಟ್ಟಿದ್ದಾರೆ. ಲಾರಿ ನೋಡಿಕೊಳ್ಳುತ್ತಿದ್ದೆ ಎನ್ನುವ ಬಗ್ಗೆ ದಾಖಲೆಗಳು ಇರುವುದಿಲ್ಲ. ಈರಪ್ಪ ಕುಬಂಾರ ಇವರ ಹೆಸರಿನಿಲ್ಲಿ ಲಾರಿ ಇತ್ತು ಎನ್ನುವ ಬಗ್ಗೆ ದಾಖಲೆಗಳು ಇರುತ್ತವೆಯೇ  ಎಂದು ಕೇಳಿದರೆ ಸಾಕ್ಷಿ ನೋಡಬೇಕಾಗುತ್ತದೆ ಎನ್ನುತ್ತಾರೆ. ನಮ್ಮ ಚಿಕ್ಕಪ್ಪನ ಮಗನ ಹೆಸರಿನಲ್ಲಿ ಲಾರಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹೇಳುವ ಹಾಗೆ ಯಾವುದೆ ಲಾರಿ ನೋಡಿಕೊಳ್ಳುತ್ತಿದ್ದ ಬಗ್ಗೆ ಯಾವುದೆ ದಾಖಲೆ ಇರುವುದಿಲ್ಲ ಆದ್ದರಿಂದ ದಾಖಲೆಗಳು ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಲಾರಿಯಿಂದ ಆದಾಯ ಬರುತ್ತಿತ್ತು ಎನ್ನುವ ಬಗ್ಗೆ ವಾದ ಪತ್ರ, ಸಾಕ್ಷಿ ಪ್ರಮಾಣ ಪತ್ರ,

ನೋಟೀಸ ಇವುಗಳಲ್ಲಿ ಈ ಬಗ್ಗೆ ತಿಳಿಸಿಲ್ಲ. ನಾನು ಈ ಮುಂಚೆ ರಾಜಕರಾಣ, ಕೃಷಿ ಹಾಗೂ ಲಾರಿ ವ್ಯವಹಾರ ಬಿಟ್ಟು ಬೇರೆ ಯಾವುದೆ ವ್ಯವಹಾರ ಮಾಡಿಲ್ಲ.

ನಾನು ಕೆ ಎಸ್ ಆರ್ ಟಿ ಸಿ ಯಲ್ಲಿ ನೌಕರನಾಗಿದ್ದೆ ಅಂದರೆ ನಿಜ. ನಾನು ರಾಜಕಾರಣ ಮಾಡುತ್ತಿದ್ದುದರಿಂದ ನೌಕರಿ ಬಿಟ್ಟಿರುತ್ತೇನೆ. ನಾನು ನೌಕರಿಗೆ ಹೋಗದೆ ಇದ್ದುದರಿಂದ ಸಂಸ್ಥೆಯವರು ನನ್ನನ್ನು ನೌಕರಿಯಿಂದ ವಜಾ ಮಾಡಿರುತ್ತಾರೆ. ಈ ಬಗ್ಗೆ ವಜಾ ಮಾಡಿದ ಆದೇಶದ ಪ್ರತಿ ಇರುತ್ತದೆ. ನನ್ನ ವಜಾ ಮಾಡಿದ ಸಮಯದಲ್ಲಿ ನನ್ನ ವಿರುದ್ಧ ನನ್ನ ಹೆಂಡತಿಯ ಸಾವಿನ ಕುರಿತು ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು ಅಂದರೆ ನಿಜ.

ಸುರೇಶ ಬಸಪ್ಪ ಕಂಬಾರ ನನ್ನ ಖಾಸ ಅಣ್ಣ. ಸದರಿಯವರು ವ್ಯವಸಾಯ ಮಾಡುತ್ತಾರೆ. ಸದರಿಯವರು ಬಿ ಎ ಪದವಿದರ. ನನಗೆ ಇಂಗ್ಲಿಷ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ಕಸ್ತೂರಿ ಬಸವರಾಜ ಕಮ್ಮಾರ ನನ್ನ ಖಾಸ ತಂಗಿ.

ನನ್ನ ಹೆಸರಿನಲ್ಲಿ ಬ್ಯಾಂಕ ಅಕೌಂಟಗಳು ಇರುತ್ತವೆ. ಸ್ಟೇಟಬ್ಯಾಂಕ ಆಫ್ ಇಂಡಿಯಾ ಹುಬ್ಬಳ್ಳಿ, ಬ್ಯಾಂಕ ಆಫ್ ಬರೋಡ ದುಮ್ಮವಾಡ, ಕರ್ನಾಟಕ ಬಾಕ ಹಾನಗಲ್ಲನಲ್ಲಿ ಖಾತೆಗಳು ಇರುತ್ತವೆ. ಬ್ಯಾಂಕ ಅಕೌಂಟ ನಂಬರಗಳು ನೆನಪಿಲ್ಲ. ದಿನಾಂಕ **01.08.2021** ರಂದು ನನ್ನ ಎಲ್ಲಾ ಬ್ಯಾಂಕ ಖಾತೆಗಳಲ್ಲಿ ಒಟ್ಟು ಎಷ್ಟು ಹಣ ಜಮಾ ಇತ್ತು ಹೇಳಲು ಬರುವುದಿಲ್ಲ. ನನ್ನ ಬ್ಯಾಂಕ ಅಕೌಂಟ ಪುಸ್ತಕಗಳನ್ನು ಹಾಜರ ಪಡಿಸಲು ಯಾವುದೆ ತೊಂದರೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ಈಗ ಸದ್ಯಕ್ಕೆ ಸದರಿ ಖಾತೆಗಳಲ್ಲಿ ಯಾವುದೆ ವ್ಯವಹಾರ ಇಲ್ಲ ಎಂದು ಹೇಳಿ ಸಾಕ್ಷಿ ಪುನಃ ಸ್ವಲ್ಪ ಸ್ವಲ್ಪ ಇರುತ್ತದೆ ಎನ್ನುತ್ತಾರೆ. ನನ್ನ **3** ಖಾತೆಗಳಲ್ಲಿ **01.08.2021** ರವರೆಗೆ ಒಟ್ಟು ಎಷ್ಟು ಹಣಕಾಸಿನ ವ್ಯವಹಾರ ಆಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ದಾವೆ ಸಲ್ಲಿಸುವ ಸಮಯದಲ್ಲಿ ನನ್ನ **3** ಖಾತೆಗಳಲ್ಲಿ ಒಟ್ಟು ಎಷ್ಟು ಹಣ ಜಮಾ ಇರುತ್ತದೆ ಹೇಳಲು ಬರುವುದಿಲ್ಲ. ನಾನು ನನ್ನ ಬ್ಯಾಂಕ ಖಾತಾ ಪುಸ್ತಕಗಳನ್ನು ಹಾಗೂ ವ್ಯವಹಾರದ ವಿವರಗಳನ್ನು ಹಾಜರ ಪಡಿಸಿಲ್ಲ. ಅವುಗಳನ್ನು ಹಾಜರ ಪಡಿಸಲು ಯಾವುದೆ ತೊಂದರೆ ಇಲ್ಲ. ನನ್ನ ಆರ್ಥಿಕ ಸ್ಥಿತಿಗಳನ್ನು ತೋರಿಸುವ ಸಲುವಾಗಿ ದಿನಾಂಕ **01.08.2021** ರಿಂದ ಇಲ್ಲಿಯವರೆಗಿನ ದಾಖಲೆಗಳನ್ನು ಹಾಜರ ಪಡಿಸಲು ಕಾಲವಕಾಶ ನೀಡಿದರೆ ಹಾಜರ ಪಡಿಸುತ್ತೇನೆ.

**(**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು, ಕಾಲಾವಕಾಶ ನೀಡಲಾಯಿತು**)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು**)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.

ಒ ಎಸ್ ನಂ. 95/2024
ಪಿ ಡಬ್ಲ್ಯೂ: 01